


**ರಾಮಮನೋಹರ ಲೋಹಿಯಾ ಜೀವನಯಾನ**

■ ನಟರಾಜ್ ಹುಳಿಯಾರ್
ಕಲೆ: ಎಚ್.ಎಸ್. ಮೋನಪ್ಪ

# ನಿಷ್ಠುರ ದನಿಗೆ ಜನಮನ್ನಣೆ: ಲೋಹಿಯಾ ಲೋಕಸಭಾ ಪ್ರವೇಶ

1962ರ ಲೋಕಸಭಾ ಚುನಾವಣೆಯ ಫಲಿತಾಂಶಗಳಿಂದ ಮುದುಡಿದ್ದ ಸಮಾಜವಾದಿ ಪಕ್ಷ ಮತ್ತೆ ಹೋರಾಟ ರಾಜಕಾರಣದಲ್ಲಿ ತೊಡಗಿ ಅಷ್ಟಿಷ್ಟು ಚುರುಕಾಗತೊಡಗಿತ್ತು. 1963ರ ಫೆಬ್ರುವರಿಯಲ್ಲಿ ಅರ್ಜುನ್‌ಸಿಂಹ ಬದೌರಿಯಾ ರಾಜನಾರಾಯಣ್ ಸಿಂಗ್‌ಗೆ ಬರೆದ ಒಂದು ಪತ್ರ ಪಕ್ಷ ಮೈ ಕೊಡವಿಕೊಂಡು ಏಳುವಂತೆ ಮಾಡಿತು:

ಪ್ರಿಯ ರಾಜ್‌ನಾರಾಯಣ್‌ಜೀ,

ಫರೂಖಾಬಾದ್ ಸಂಸದರಾದ ಮೂಲ್‌ಚಂದ್ ದುಬೆ ತೀರಿಕೊಂಡಿರುವುದರಿಂದ ಫರೂಖಾಬಾದ್ ಲೋಕಸಭಾ ಕ್ಷೇತ್ರ ತೆರವಾಗಿದೆ.

ಈ ಕ್ಷೇತ್ರದಿಂದ ಡಾಕ್ಟರ್ ಸಾಹಬ್ ಚುನಾವಣೆಗೆ ಸ್ಪರ್ಧಿಸಿದರೆ ಚೆನ್ನಾಗಿರುತ್ತದೆ ಎಂಬುದು ನನ್ನ ಸಲಹೆ. ಈ ಚುನಾವಣೆಯಲ್ಲಿ ಡಾಕ್ಟರ್ ಸಾಹಬ್ ಅವರ ಯಶಸ್ಸಿನ ಸಂಪೂರ್ಣ ಜವಾಬ್ದಾರಿಯನ್ನು ನಾನು ಹೊರುತ್ತೇನೆ.

ನಾನು ನೇರವಾಗಿ ಡಾಕ್ಟರ್ ಸಾಹಬ್‌ಗೆ ಪತ್ರ ಬರೆಯದೆ ನಿಮಗೆ ಬರೆಯುತ್ತಿರುವೆ. ಡಾಕ್ಟರ್ ಸಾಹಬ್ ಎಲ್ಲಿದ್ದರೂ ನೀವು ಅವರನ್ನು ಸಂಪರ್ಕ ಮಾಡಿ, ಅವರು ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಮನ ಒಲಿಸಿ. ಡಾಕ್ಟರ್ ಸಾಹಬ್ ತಾವೇ ಖುದ್ದು ಬಂದು ಫರೂಖಾಬಾದ್ ಕಾರ್ಯಕರ್ತರ ಸಭೆಯಲ್ಲಿ ಕಾರ್ಯಕರ್ತರ ಜೊತೆ ಮಾತಾಡಲಿ. ಸಮಾಜವಾದಿ ಪಕ್ಷದ ಪ್ರಭಾವ ಇಟಾವಾ ಕ್ಷೇತ್ರದಲ್ಲಿ ಎಷ್ಟಿದೆಯೋ ಅಷ್ಟೇ ಪ್ರಭಾವ ಫರೂಖಾಬಾದ್ ಕ್ಷೇತ್ರದಲ್ಲೂ ಇದೆ. ಇಟಾವಾದಲ್ಲಿ ನನ್ನ ವೈಯಕ್ತಿಕ ಪ್ರಭಾವ ಎಷ್ಟಿದೆಯೋ ಈ ಕ್ಷೇತ್ರದಲ್ಲೂ ಅಷ್ಟೇ ಇದೆ.

